JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# Niranjnara Mattu Premachandara Kadambarigalalli Mahile

**ಸಂಶೋಧಕರು**
**ಗುಡಿಹಿಂದಲ ಹುಲಿಕುಂಟಪ್ಪ**

**ಮಾರ್ಗದರ್ಶಕರು**
**ಡಾ ಶ್ರೀಪತಿ ಕೆ ಹಳಗುಂದ**
**ಸಹಾಯಕ ಪ್ರಾಧ್ಯಾಪಕರು**
**ಸ ಪ್ರ ದ ಕಾಲೇಜು–ರಿಪ್ಪನ್‌ಪೇಟೆ**

ನಿರಂಜನ ಮತ್ತು ಪ್ರೇಮಚಂದರ ಕಾದಂಬರಿಗಳಲ್ಲಿ ವಿವಿಧವೂ, ಒಂದಕ್ಕೊಂದು ವಿರೋಧವೂ ಆದ ವಿಚಾರಗಳ ಸಮನ್ವಯವನ್ನು ಕಾಣುತ್ತೇವೆ. ಪೂರ್ವಾತ್ಯ, ಪಾಶ್ಚಿಮಾತ್ಯ ಸಂಸ್ಕೃತಿಗಳ ಅಂತರ ಮತ್ತು ಘರ್ಷಣೆ, ಸಂಪ್ರದಾಯ ಮತ್ತು ಅದರ ವಿರುದ್ಧ ಬಂಡಾಯ, ಸಮಾಜ ಸುಧಾರಣೆ ಮತ್ತು ಕ್ರಾಂತಿ–ಇತ್ಯಾದಿ ಚಿತ್ರಣವನ್ನು ಅವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಆಗಿನ ಕಾಲದಲ್ಲಿ ಒಬ್ಬ ವಿಧವೆಯನ್ನು ಮದುವೆಯಾಗಿ ಅಸಾಧಾರಣ ಧೈರ್ಯವನ್ನು ಸಂಪ್ರದಾಯದ ವಿರುದ್ಧ ಬಂಡೇಳುವ ತಮ್ಮ ಮನೋವೃತ್ತಿಯನ್ನು ತೋರಿಸಿದರು. ನಿರಂಜನ ಮತ್ತು ಪ್ರೇಮಚಂದರು ಪ್ರತಿಯೊಂದು ಕಾದಂಬರಿಯಲ್ಲಿ ಜೀವನದ ವಿವಿಧ ಆಯಾಮಗಳ ಮುಖಗಳನ್ನು ವಿವರಿಸುವುದಲ್ಲದೆ ವ್ಯಕ್ತಿ ಮತ್ತು ಸಮಾಜಗಳ ಮಧ್ಯೆ ನಡೆಯುವ  ಮತ್ತು ನಡೆಯುತ್ತಿರುವ ಸೆಣಸಾಟವನ್ನು ಕಾಣುತ್ತೇವೆ. ಇಂದಿಗೂ ಭಾರತೀಯ ಮಹಿಳೆ ಸಂಪ್ರದಾಯಗ್ರಸ್ಥ ಈ ಸಮಾಜದಲ್ಲಿ  ವಿಧವಾ ವಿವಾಹ ಸಾರ್ವತ್ರಿಕವಾಗಿ ಸಂಪ್ರದಾಯವಾಗಿಲ್ಲ. ನಿರಂಜನ ಮತ್ತು ಪ್ರೇಮಚಂದರು ವಿಧವೆಯ ಗೋಳನ್ನು ಬಲ್ಲವರು. ಅಲ್ಪವಯಸ್ಕ ವಿಧವೆಯ ಬಾಳಿನ ಬವಣೆಯನ್ನು ಮಾರ್ಮಿಕವಾಗಿ ಹೃದಯವೇ ಕಿತ್ತು ಬರುವಂತೆ ಚಿತ್ರಿಸಿದ್ದಾರೆ. ಇಳಿವಯಸ್ಸಿನ ಮತ್ತು ಹಳೆಯ ವಿಚಾರದ ಹೆಂಗಸರ ಮೊನಚಾದ ಮಾತಿನಿಂದ ಹದಿನಾರು ಹದಿನೇಳು ವಯಸ್ಸಿನ ವಿಧವಾ ಸೊಸೆ ರಾಮಕಲಿಯ ಹೃದಯ ಜಲ್ಲಡಿಯಾಗಿದೆ. ಈ ಬಗೆಯಲ್ಲಿ  ಭಾರತೀಯ ಮಹಿಳೆಯು ದುರ್ಭಾಗಿನಿ, ಮೂಕಪ್ರಾಣಿ, ಪೂಜೆ ಪುನಸ್ಕಾರಗಳ ನೆಪದಿಂದ ಹೆಚ್ಚು ವೇಳೆ ಮನೆಯ ಹೊರಗೇ ಇರುತ್ತಾಳೆ. ಸಾಧು ಸಂತರ ಸುಳಿಯಲ್ಲಿ ಸಿಕ್ಕು ಅವರ ಚಿಲುಮೆಗಳಿಗೆ ಬೇಕಾದ ಭಾಗವನ್ನು ಸೋಸಿಕೊಡುತ್ತಾ, ಕಾಲ ಕಳೆಯುತ್ತಾಳೆ, ಈ ಪರಿವಾರದ ಬಗೆಗಿನ ಅನುಕಂಪ, ನೋವು ನಿರಂಜನ ಮತ್ತು ಪ್ರೇಮಚಂದರ ಕೃತಿಗಳಲ್ಲಿ ಕಂಡುಬರುತ್ತದೆ.

ಪ್ರೇಮಚಂದರು ಒಂದು ಯುಗ, ಅವರ ಸಾಹಿತ್ಯವು ಒಂದು ಶತಮಾನದ ಪರಿಧಿಯನ್ನು ಹೊಂದಿದೆ. ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ತಮ್ಮ ಅವಸಾನದವರೆಗೆ ಅವರು ಸತತವಾಗಿ ಬರೆದರು. ಭಾರತದ ರಾಜಕೀಯ ಸಾಮಾಜಿಕ ಸಾಂಸ್ಕೃತಿಕ ಮತ್ತು ಆರ್ಥಿಕ ಜೀವನದ ಕುಶಲೋಪರಿ ಅವರ ಕೃತಿಗಳಲ್ಲಿದೆ. ಅವರು ದೇಶದಲ್ಲಿನ ಚಂಡಮಾರುತದಂತಹ ಆಕ್ರೋಶವನ್ನು ಅನುಭವಿಸಿ ದೇಶದ ಆಗು ಹೋಗುಗಳನ್ನು ನೋಡಿ ಅನುಭವಿಸಿ ಅದರ ಬಗ್ಗೆ ಆಳವಾದ ಅನುಕಂಪವನ್ನು ಹೊಂದಿ ಸಾಹಿತ್ಯ ಕೃಷಿಗೈದರು.

ಪ್ರೇಮಚಂದರ ಕಾದಂಬರಿಗಳಲ್ಲಿ ವಿವಿಧವೂ, ಒಂದಕ್ಕೊಂದು ವಿರೋಧವೂ ಆದ ವಿಚಾರಗಳ ಸಮನ್ವಯವನ್ನು ಕಾಣುತ್ತೇವೆ. ಪೂರ್ವಾತ್ಯ, ಪಾಶ್ಚಿಮಾತ್ಯ ಸಂಸ್ಕೃತಿಗಳ ಅಂತರ ಮತ್ತು ಘರ್ಷಣೆ ಸಂಪ್ರದಾಯ ಮತ್ತು ಅದರ ವಿರುದ್ಧ ಬಂಡಾಯ: ಸಮಾಜ ಸುಧಾರಣೆ ಮತ್ತು ಕ್ರಾಂತಿ-ಇತ್ಯಾದಿ ಚಿತ್ರಣವನ್ನು ಅವರ ಕಾದಂಬರಿಗಳಲ್ಲಿ ಕಾಣುತ್ತೇವೆ. ಆಗಿನ ಕಾಲದಲ್ಲಿ ಒಬ್ಬ ವಿಧವೆಯನ್ನು ಮದುವೆಯಾಗಿ ಅಸಾಧಾರಣ ಧೈರ್ಯವನ್ನು ಸಂಪ್ರದಾಯದ ವಿರುದ್ಧ ಬಂಡೇಳುವ ತಮ್ಮ ಮನೋವೃತ್ತಿಯನ್ನು ತೋರಿಸಿದರು. ಸುಪ್ರಸಿದ್ಧ ಕತೆಗಾರ ಮೊಪಾಸಾ ಹೇಳುವಂತೆ ಸಾಹಿತಿಯು ತನ್ನ ವಿಷಯವನ್ನು ಆರಿಸಿಕೊಂಡು ನಂತರ, ಅದಕ್ಕೆ ಸಂಬಂಧಪಟ್ಟ ವಿವರಣೆಯನ್ನು ಮಾತ್ರ ಕೊಡಬೇಕು, ಉಳಿದವುಗಳನ್ನು ಕೈ ಬಿಡಬೇಕು ಎಂದು ಹೇಳಿದ್ದಾನೆ. ಪ್ರೇಮಚಂದರ ಕಾದಂಬರಿಗಳು ಈ ಅಭಿಪ್ರಾಯದ ಒರೆಗಲ್ಲಿಗೆ ನೂರಕ್ಕೆ ನೂರು ಇಳಿಯುತ್ತವೆ. ಕಾದಂಬರಿಗೂ ಸಮಾಜಕ್ಕೂ ಆಳವೂ ಸಧೃಡವೂ ಆದ ಸಂಭಂದವಿದೆ. ಎಂಬ ಮಾತನ್ನು ಎಲ್ಲರು ಒಪ್ಪಿಕೊಳ್ಳುತ್ತಾರೆ. ಮತ್ತೊಬ್ಬ ತತ್ವಜ್ಞಾನಿ ಹೇಳುವಂತೆ ಕಾದಂಬರಿಕಾರನ ಕೆಲಸವೆಂದರೆ ಸಮಾಜ ಮತ್ತು ವ್ಯಕ್ತಿಗಳ ಮಧ್ಯೆ ನಡೆಯುವ ಕ್ರಿಯೆ ಮತ್ತು ಪ್ರತಿಕ್ರಿಯೆಗಳನ್ನು ಎತ್ತಿ ತೋರಿಸುವುದು ಎಂದಿದ್ದಾರೆ. ಈ ದೃಷ್ಟಿಯಿಂದ ನೋಡಿದರೆ ಪ್ರೇಮಚಂದರು ಪ್ರತಿಯೊಂದು ಕಾದಂಬರಿಯಲ್ಲಿ ಜೀವನದ ವಿವಿಧ ಮುಖಗಳನ್ನು ವಿವರಿಸುವುದಲ್ಲದೆ ವ್ಯಕ್ತಿ ಮತ್ತು ಸಮಾಜಗಳ ಮಧ್ಯೆ ನಡೆಯುವ ಮತ್ತು ನಡೆಯುತ್ತಿರುವ ಸೆಣಸಾಟವನ್ನು ಬಹಳ ಯಶಸ್ವಿಯಾಗಿ ತೋರಿಸುವಲ್ಲಿ ಯಶಕಂಡಿದ್ದಾರೆ.

ಪ್ರೇಮಚಂದರ ಕಾದಂಬರಿಗಳನ್ನು ಐತಿಹಾಸಿಕ ಘಟ್ಟಗಳೆಂದು ಹೇಳಬಹುದು ಹೀಗೆ ಹೇಳುವುದಕ್ಕೆ ಹಲವಾರು ಕಾರಣಗಳಿವೆ. ಭಾರತದ ಇತಿಹಾಸದ ಹೊನಲು. ಮುಂದೆ ಸಾಗಿದಂತೆ ಸಮಾಜ ಮತ್ತು ಸಂಸ್ಕೃತಿಗಳಲ್ಲಿ ಬದಲಾವಣೆಗಳಾಗಿದ್ದು ಅನಿವಾರ್ಯ, ಈ ಬದಲಾವಣೆ ಯಥಾವತ್ತಾಗಿ ಪ್ರೇಮಚಂದರು ತಮ್ಮ ಕಾದಂಬರಿ ಸಾಹಿತ್ಯದಲ್ಲಿ ಕನ್ನಡಿ ಹಿಡಿದರು.

ಇಂದಿಗೂ ವಿಧವಾ ವಿವಾಹ ಸಾರ್ವತ್ರಿಕವಾಗಿ ಸಂಪ್ರದಾಯವಾಗಿಲ್ಲ. ಪ್ರೇಮಚಂದರು ವಿಧವೆಯ ಗೋಳನ್ನು ಬಲ್ಲವರು. ಅಲ್ಪವಯಸ್ಕ ವಿಧವೆಯ ಬಾಳಿನ ಬವಣೆಯನ್ನು ಮಾರ್ಮಿಕವಾಗಿ ಹೃದಯವೇ ಕಿತ್ತು ಬರುವಂತೆ ಚಿತ್ರಿಸಿದ್ದಾರೆ. ಇಳಿವಯಸ್ಸಿನ ಮತ್ತು ಹಳೆಯ ವಿಚಾರದ ಹೆಂಗಸರ ಮೊನಚಾದ ಮಾತಿನಿಂದ ಹದಿನಾರು ಹದಿನೇಳು ವಯಸ್ಸಿನ ವಿಧವಾ ಸೊಸೆ ರಾಮಕಲಿಯ ಹೃದಯ ಜಲ್ಲಡಿಯಾಗಿದೆ. ಅವಳ ಮಾತಿನಲ್ಲೇ ಹೇಳುವುದಾದರೆ ಇತರ ಹೆಂಗಸರು ಶೃಂಗರಿಸಿಕೊಂಡು ನಗುತ್ತ ತಲೆಯೆತ್ತಿ ತಿರುಗಾಡುವುದನ್ನು ನೋಡಿದರೆ ನನ್ನ ಎದೆಯ ಮೇಲೆ ಹಾವು ಹರಿದಾಡಿದಂತೆ ಆಗುತ್ತದೆ. ವಿಧವೆಯಾಗಿದ್ದೇ ತಡ ಮನೆಯವರೆಲ್ಲರ ದಾಸಿ ಆಗಿಬಿಟ್ಟೆ, ಇದರ ಮೇಲೆ ಎದ್ದರೆ ಮೊಚ್ಚೆ ಪೆಟ್ಟು, ಕುಳಿತರೆ ಒದೆತ. ಕಾಡಿಗೆ ಹಚ್ಚಬೇಡ, ಸುವಾಸನೆ ಬಳಿದುಕೊಳ್ಳಬೇಡ, ಹೆಳಲು ಹಾಕಿಕೊಳ್ಳಬೇಡ, ಬಣ್ಣದ ಸೀರೆ ಉಡಬೇಡ, ತಾಂಬೂಲ ಸೇವಿಸಬೇಡ, ಅಯ್ಯೋ ದೇವರೇ ನಾವೂ ಮನುಷ್ಯರಲ್ಲವೇ, ನಮಗೂ ತಾರುಣ್ಯವಿದೆ, ಇತರರ ಸಂತಸ ಚೆಲ್ಲಾಟಗಳನ್ನು ನೋಡಿ ನೋಡಿ ನಮ್ಮ ಮನಸ್ಸಿನಲ್ಲಿಯೂ ಆಸೆಗಳು ತಲೆಯೆತ್ತುತ್ತವೆ. ಹಸಿವಾದಾಗ ಆಹಾರ ಸಿಕ್ಕದಿದ್ದರೆ ಕಳವು ಮಾಡಬೇಕಾಗುತ್ತದೆ. ಇಲ್ಲದರ ಪರಿಣಾಮ ಏನು? ದುರ್ಭಾಗಿನಿ, ಮೂಕಪ್ರಾಣಿ, ಪೂಜೆ ಪುನಸ್ಕಾರಗಳ ನೆಪದಿಂದ ಹೆಚ್ಚು ವೇಳೆ ಮನೆಯ ಹೊರಗೇ ಇರುತ್ತಾಳೆ. ಸಾಧು ಸಂತರ ಸುಳಿಯಲ್ಲಿ ಸಿಕ್ಕು ಅವರ ಚಿಲುಮೆಗಳಿಗೆ ಬೇಕಾದ ಭಾಗವನ್ನು ಸೋಸಿಕೊಡುತ್ತಾ, ಕಾಲ ಕಳೆಯುತ್ತ ಏನೇನು ಮಾಡುವುದಿಲ್ಲ? ಈ ಪರಿವಾರದ ಅನುಕಂಪ, ನೋವು ಪ್ರೇಮಚಂದರ ಕೃತಿಗಳಲ್ಲಿ ಕಂಡುಬರುತ್ತವೆ. ವಿಧವೆಯರ ಈಬಗೆಯ ದಃಖವನ್ನು ಗುರುತಿಸಿ ಅವರು ಒಬ್ಬ ವಿಧವೆಯನ್ನೇ ಮದುವೆಯಾದರು ಎಂಬುವು ಈಗ ಇತಿಹಾಸ.

ಪ್ರೇಮಚಂದರ ಸೇವಾಸದನವು ವಿಶೇಷವಾಗಿ ಮಹಿಳೆಯರ ಸಾಮಾಜಿಕ ಸಮಸ್ಯೆಗಳನ್ನು ಎತ್ತಿಕೊಂಡಿದ್ದಾರೆ. ಈ ಕಾದಂಬರಿಯಲ್ಲಿ ವ್ಯಕ್ತಿಚಿತ್ರಗಳ ವಿಶೇಷಗಳು ಕಾಣಿಸಿಕೊಂಡಿದ್ದಾರೆ. ಇವರ ನಾಯಕಿ ಸುಮನ್. ಇವಳು ಸುಂದರಿ ವಿವಾಹಿತ ಹೆಂಗಸು. ಇವಳು ಒಂದು ದಿನ ನೆರೆಯವರ ಮನೆಯಲ್ಲಿ ನಡೆಯುತ್ತಿದ್ದ ಗಣಿಕಾ ಸ್ತ್ರೀಯರ ನೃತ್ಯದಲ್ಲಿ ನೋಡಲು ಹೋಗಿ ರಾತ್ರಿ ಬಹಳ ಕಾಲ ಅಲ್ಲಿಯೇ ನಿಲ್ಲುತ್ತಾಳೆ. ಈ ಒಂದು ತಪ್ಪಿಗಾಗಿ ಅವಳಿಗೆ ಗಂಡನ ಮನೆ ಕೊನೆ ತನಕ ಎರವಾಗುತ್ತದೆ. ಆದರೆ ಮುಂದೆ ಕಥಾನಾಯಕಿ ಸುಮನ ಹೀಗಿಯೇ ತನ್ನಂತೆ ಅವಳು ಜೀವನದಲ್ಲಿ ಪೆಟ್ಟು ತಿಂದ ನೂರಾರು ಮಹಿಳೆಯರ ಬದುಕನ್ನು ಸುಧಾರಿಸುವಲ್ಲಿ ತನ್ನ ಜೀವನವನ್ನು ಸವೆಸಿ ಉನ್ನತ ಸ್ಥಾನವನ್ನು ಕೊನೆಯಲ್ಲಿ ಪಡೆಯುತ್ತಾಳೆ.

ಇನ್ನು ನಿರ್ಮಲಾ ಕಾದಂಬರಿಯಲ್ಲಿ ಪ್ರೇಮಚಂದರು ಮತ್ತೊಮ್ಮೆ ಮತ್ತೊಂದು ಸಾಮಾಜಿಕ ಸಮಸ್ಯೆಯನ್ನು ಎತ್ತಿಕೊಂಡಿದ್ದಾರೆ. ನಾಯಕಿ ನಿರ್ಮಲಾ ಇವಳ ವಯಸ್ಸು ಸಣ್ಣದು ಆದರೆ ಇವಳನ್ನು ವಯಸ್ಸಾದ ತೋತಾರಂ ಎಂಬುವರಿಗೆ ಕೊಟ್ಟು ಮದುವೆಯಾಗುತ್ತದೆ. ಕಿರಿಯ ವಯಸ್ಸಿನ ಈ ಮಲತಾಯಿ ಮಕ್ಕಳನ್ನು ಪ್ರೀತಿಯಿಂದ ನೋಡುತ್ತಾಳೆ. ಮೊದ ಮೊದಲು ಗಂಡನಿಂದ ದೂರವಿರುತ್ತಾಳೆ. ಬರುಬರುತ್ತಾ ಇದು ನನ್ನ ಕರ್ತವ್ಯವೆಂದು ಅವಳಿಗೆ ಗೊತ್ತು ಆದರೆ ಕನಸ್ಸನ್ನು ನೆನೆದು ಯಾಕೆ ದುಃಖ ಪಡಬೇಕು ಎಂದು ಸ್ಥಿರತೆಯನ್ನು ತಂದು ಕೊಳ್ಳುತ್ತಾಳೆ. ಮಲ ಮಗನಾದ ಮಸಾರಾಂನ ಮೇಲೆ ಈಕೆ ತೋರುವ ಪ್ರೀತಿಯನ್ನು ಗಂಡ ತೋತಾರಾಂ ಸಂಶಯದ ದೃಷ್ಟಿಯಿಂದ ನೋಡುತ್ತಾನೆ. ತನ್ನಿಂದಾಗಿ ಇವಳಿಗೆ ಬಂದ ಕಳಂಕವನ್ನು ಮಸಾರಾಂನಿಂದ ಸಹಿಸಲಾಗದೆ, ಅವನ ಆರೋಗ್ಯ ಕೆಟ್ಟು ಕ್ಷಯ ರೋಗಕ್ಕೆ ತುತ್ತಾಗುತ್ತಾನೆ. ಅವನು ಸಾಯುವ ಮುಂಚೆ ನಿರ್ಮಲೆಯ ಪಾದವನ್ನು ಮುಟ್ಟಿ ನಮಸ್ಕಾರ ಮಾಡಿ ನಾನು ನಿನ್ನನ್ನು ತಾಯಿಯೆಂದು ತಿಳಿದೆ, ಮುಂದಿನ ಜನ್ಮದಲ್ಲಿ ನಾನು ನಿನ್ನ ಉದರದಲ್ಲಿ ಹುಟ್ಟುವಂತಾಗಲಿ ಎಂದು ಹೇಳಿ ಕಣ್ಣು ಮುಚ್ಚುತ್ತಾನೆ. ನಿರ್ಮಲಾ ತನ್ನ ರಕ್ತವನ್ನು ಕೊಟ್ಟು ಅವನನ್ನು ಉಳಿಸುವ ಪ್ರಯತ್ನ ಮಾಡುತ್ತಾಳೆ. ಆಗ ವೃದ್ಧ ಪತಿಯ ಕಣ್ಣು ತೆರೆಯುತ್ತದೆ. ಅವನ ಕಣ್ಣಲ್ಲಿ ಅವಳ ಬೆಲೆ ಹೆಚ್ಚಾಗುತ್ತದೆ. ಹೀಗೆ ಪ್ರೇಮಚಂದರು ನಿರ್ಮಲೆಯ ಮೂಲಕ ಮಲತಾಯಿಯ ಶುದ್ಧ ಪ್ರೇಮ ಭಾವನೆ, ಕರ್ತವ್ಯ ಪರಾಣಯತೆ, ಮಾನಕ್ಕಾಗಿ ಮಾಡಿದ ಬಲಿದಾನ ಇತ್ಯಾದಿ ಸದ್ಗುಣಗಳನ್ನು ಅನುಪಮವಾಗಿ ಚಿತ್ರಿಸಿದ್ದಾರೆ.

ನಂತರ ಬಂದ ಗಬನ್ ಮತ್ತು ಗೋದಾನಗಳಲ್ಲಿ ಬರುವ ನಾಯಕಿಯರೆಲ್ಲರೂ ತಮ್ಮ ಭೂಮಿಕೆಗಳಲ್ಲಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಗೋದಾನದಲ್ಲಿ ಪ್ರತಿಯೊಂದು ಪ್ರಸಂಗವನ್ನು ಅದು ರೂಪಾ ಮತ್ತು ಸೋನಾಳ ಮದುವೆಯಾಗಿರಬಹುದು, ಅಥವಾ ಹೋರಿರಾಮನ ಸಾವಾಗಿರಬಹುದು, ಅದು ಕಣ್ಣ ಮುಂದೆ ನಡೆದಂತೆ ಚಿತ್ರಿಸಲಾಗಿದೆ. ಅದರಲ್ಲಿ ನೈಜತೆಯೂ ಯಥಾರ್ಥತೆಯೂ ಆಗಿದೆ. ಅಲ್ಲದೆ ಮಾಲತಿ ಮತ್ತು ಮೆಹತಾರವರ ಬಾಲಿಶ ಪ್ರೀತಿಯೂ ಇದೆ. ಮಥುರಾ ಮತ್ತು ಸಿಲಿಯಾರ ದೈಹಿಕ ವಿಷಯದ ಆಕರ್ಷಣೆ ಇದೆ. ಕಾದಂಬರಿಯಲ್ಲಿ ಗೋವಿಂದಿಯ ನಾಗರೀಕತೆಯ ಹೃದಯ ವೈಶಾಲ್ಯವಿದೆ. ಜಾತೀಯತೆಯ ತ್ಯಾಗಗಳಿವೆ. ಧನಿಯಾಳ ಹಳ್ಳಿಯ ರೀತಿ ನೀತಿ, ತ್ಯಾಗ ಮತ್ತು ಸೇವೆಯ ನಿರೂಪಣೆ ಇದೆ. ವರ್ತಕರ ಚಾಲಾಕಿತನ, ಮೋಸಗಾರಿಕೆ, ಒಕ್ಕಲಿಗರ ತಿಳಿಮನಸ್ಸು ಮತ್ತು ಅವರ ಮೇಲೆ ನಡೆದ ಹಿಂಸಾಚಾರ, ಬ್ರಾಹ್ಮಣರ ದಬ್ಬಾಳಿಕೆ, ಹರಿಜನರ ಸೇಡು ಇತ್ಯಾದಿಗಳೂ ಸೇರಿವೆ. ನಿಜವಾಗಿಯೂ ಗೋದಾನ ಪ್ರೇಮಚಂದರ ಮಹಾ ಕೃತಿ.

ಧನಿಯಾ ಗೋದಾನದ ಪ್ರಮುಖ ಪಾತ್ರದಲ್ಲೊಂದು. ಅವಳ ದಯೆ, ನಿಷ್ಠೆ ಮತ್ತು ತ್ಯಾಗಗಳ ದೇವಿ. ಅವಳ ಜೀವನವೆಲ್ಲ ಹೋರಾಟ, ಜೀವನ ಜಂಜಾಟಗಳಿಂದ ತುಂಬಿದೆ. ಪೆಟ್ಟು ಸಣ್ಣದಾಗಿದ್ದರೂ ಅವಳ ವೇದನೆಗೊಂಡು ಆಕ್ರೋಶ ಮಾಡುತ್ತಾಳೆ ಆದರೆ ಮರುಕ್ಷಣದಲ್ಲಿಯೇ ಕರಗಿ ಅಶ್ರುಗಳನ್ನು ಸುರಿಸುತ್ತಾಳೆ. ಮತ್ತೊಂದು ಪ್ರಸಂಗದಲ್ಲಿ ಹೋರಿ ಸಹೋದರ ಹೀರಾ ಮನೆಯ ತಪಾಸಣೆಗಾಗಿ ಪೋಲೀಸ ಅಧಿಕಾರಿ ದರೋಗಾ ಬರುತ್ತಾನೆ. ದರೋಗನನ್ನು ಸಮಾಧಾನ ಮಾಡುವುದಕ್ಕೆ ವರ್ತಕ ಝುಂಗರೀ ಸಿಂಹ ಮೂವತ್ತು ರೂಗಳನ್ನು ಹೋರಿಯ ಕೈಯಲ್ಲಿ ಹಾಕಿ ಲಂಚವನ್ನು ಕೊಡಲು ಪ್ರೇರೇಪಿಸುತ್ತಾನೆ. ಆಗ ಧನಿಯಾ ಸಿಡಿದೆದ್ದು ಮನೆಯಲ್ಲಿರುವ ಪ್ರಾಣಿ ಹಗಲಿರುಳು ಹಸಿವೆಯಾಗಿ ಸಾಯಲಿ ತುತ್ತು ತುತ್ತಿಗಾಗಿ ಬಾಯಿಬಿಡಲಿ, ಮಾನ ಮುಚ್ಚಿಕೊಳ್ಳಲು ಬಟ್ಟೆಯೂ ಸಿಕ್ಕಲಿಲ್ಲ, ಈಗ ಮರ್ಯಾದೆ ಕಾಪಾಡಲು ಬೊಗಸೆ ತುಂಬ ಹಣವನ್ನು ಕೊಡಲು ಹೊರಟಿದ್ದಾನೆ. ಯಾವ ಮನೆಯಲ್ಲಿ ಇಲಿಗಳು ಬಿದ್ದು ಲೂಟಿ ಮಾಡುತ್ತವೋ ಅವನು ಮರ್ಯಾದಸ್ತನೇ? ದರೋಗನ ತಪಾಸಣೆ ಅವಶ್ಯವಾಗಿ ನಡೆಯುತ್ತದೆ. ಹೂಂ ಪ್ರಾರಂಭಿಸು ಎಲ್ಲಿ ಬೇಕಾದರೂ ಹುಡುಕು ಎಂದು ಆಕ್ರೋಶ ವ್ಯಕ್ತ ಪಡಿಸುತ್ತಾಳೆ. ಈ ಕೋಪದ ಹಿನ್ನೆಲೆಯಲ್ಲಿ ಅಸಾಹಯಕತೆಗಳಿವೆ. ಆದರೆ ಹೆಣ್ಣಾಗಿಯೂ ಆಕೆ ತೋರಿಸಿದ ಧೈರ್ಯ ಸ್ಥೈರ್ಯ ಗಮನೀಯವಾಗಿದೆ. ಅವಳ ಮಗ ಗೋಬರನ ಅಚಾತುರ್ಯದಿಂದ ಝುನಿಯಾ ಗರ್ಭ ಧರಿಸುತ್ತಾಳೆ, ಝುನಿಯಾಗೆ ಇವಳು ತನ್ನ ಮನೆಯಲ್ಲಿಯೇ ಆಶ್ರಯ ಕೊಟ್ಟಾಗ ಕುಲದವರು ಬಹಿಷ್ಕಾರ ಹಾಕುವ ಬೆದರಿಕೆ ಹಾಕುತ್ತಾರೆ. ಆದರೆ ಕೆಚ್ಚೆದೆಯ ಧನಿಯಾ ನಾವು ಕುಲದಲ್ಲಿರಬೇಕಾಗಿಲ್ಲ, ಈಗಲೂ ನಮ್ಮ ಬೆವರನ್ನು ಸುರಿಸಿ ತಿನ್ನುತ್ತೇವೆ. ಆಗಲೂ ಹಾಗೇ ಮಾಡುತ್ತೇವೆ. ಎಂದು ಸಾರುತ್ತಾಳೆ. ಹೋರಿ ಧರ್ಮ ಬೇಕು, ಆದರೆ ಧನಿಯಾಳಲ್ಲಿ ಕಳ್ಳರು, ದರೋಡೆಗಾರರು, ಧರ್ಮಾತ್ಮರು, ಪೋಲೀಸರು ಇವರುಗಳಿಗೆ ಇದ್ದುದನ್ನು ಇದ್ದಂತೆ ಹೇಳುವ ಕಿಚ್ಚು ಇತ್ತು. ಭಾರತದ ಎಲ್ಲಾ ಮಹಿಳೆಯರಂತೆ ಇವಳೂ ತನ್ನ ಗಂಡನ ದುಃಖದಲ್ಲಿ ಭಾಗಿಯಾಗುತ್ತಾಳೆ. ತನ್ನ ಸಂಸಾರದ ರಥದ ಗಾಲಿಗಳನ್ನು ಸಮಾಜ ತಂದೊಡ್ಡುವ ಅನೇಕ ಅಡೆತಡೆಗಳ ಕೊರಕಲಿನಲ್ಲಿ ಎಳೆಯುತ್ತಾ ಸಾಗುತ್ತಾಳೆ. ಅವಳಿಗೆ ಯಾವುದು ಸರಿ ಎನಿಸುತ್ತೋ ಅದನ್ನೇ ಮಾಡುತ್ತಾಳೆ. ಹಾಗೆ ಮಾಡುವಲ್ಲಿ ಎಂತಹದ್ದೋ ಅಡೆತಡೆ ಬಂದರೂ ಅದನ್ನು ಲೆಕ್ಕಿಸುವುದಿಲ್ಲ.

ಗೋದಾನದ ಇನ್ನೊಂದು ಪ್ರಮುಖ ಮಹಿಳಾ ಪಾತ್ರವೆಂದರೆ ಅದು ಮಾಲತಿ. ಮೊದಮೊದಲು ಇವಳು ಹೂವಿನಿಂದ ಹೂವಿಗೆ ಹಾರುವ ಬಣ್ಣದ ಚಿಟ್ಟೆಯಂತೆ ಕಾಣುತ್ತಾಳೆ. ಆದರೆ ಮೆಹತಾರನ್ನು ಮನಸಾ ಪ್ರೀತಿಸಿದ ಮೇಲೆ ತ್ಯಾಗ ಮತ್ತು ಸಮರ್ಪಣಾ ಮೂರ್ತಿಯಾಗಿ

ನಿಲ್ಲುತ್ತಾಳೆ. ಬಡವರು ಮತ್ತು ದಲಿತರಿಗೆ ಆರೋಗ್ಯದಿಂದ ಹೇಗೆ ಇರಬೇಕೆಂದು ಹೇಳಿಕೊಡುವ ವೈದ್ಯೆಯಾಗಿ ನಿಲ್ಲುತ್ತಾಳೆ. ಅವರಲ್ಲಿ ತಮ್ಮ ಹಕ್ಕು ಬಾದ್ಯತೆಗಳನ್ನು ಸರಕಾರದಿಂದ ಕೇಳುವಂತೆ ಮಾಡುತ್ತಾಳೆ. ಅವರಿಗೆ

ಧೈರ್ಯ ತುಂಬುತ್ತಾಳೆ. ಆಕೆಯ ಜೀವನದಲ್ಲಿ ಪೂರ್ಣ ಪರಿವರ್ತನೆಯಾಗುವ ಒಂದು ದಿನವೂ ಬರುತ್ತದೆ. ಫ್ಯಾಷನ್ ಆರಾಧನೆಯನ್ನು ತೊರೆದು ಬಡವರ ದಲಿತರ ಸೇವೆಗೆ ತೊಡಗುತ್ತಾಳೆ. ತನ್ನ ಪ್ರೇಮಿ ಮೆಹತಾ ಇವಳನ್ನು ಪರೀಕ್ಷಕನ ದೃಷ್ಟಿಯಿಂದ ನೋಡುತ್ತಾನೆ. ಒಮ್ಮೆ ಅವಳು ಮೆಹತಾನನ್ನು ಕುರಿತು ನೀನು ನನ್ನನ್ನು ಯಾವಾಗಲೂ ಪರೀಕ್ಷಕನ ದೃಷ್ಟಿಯಿಂದ ನೋಡುತ್ತೀ ನಿನಗೆ ಇಷ್ಟು ತಿಳಿಯುವುದಿಲ್ಲವೇ? ಹೆಂಗಸಿಗೆ ಬೇಕಾಗಿರುವುದು ಪರೀಕ್ಷೆಯಲ್ಲ, ಪ್ರೀತಿಯೆಂದು ಹೇಳುತ್ತಾಳೆ. ಮಾಲತಿಗೆ ಈ ಸಂಶಯ ಈ ಪರೀಕ್ಷೆ ಸರಿ ಬರುವುದಿಲ್ಲ. ಪ್ರೀತಿಯು ಹುಲಿಯಂತಿದ್ದರೆ ಅದರಿಂದ ನಾನು ದೂರವಿರುತ್ತೇನೆ. ಅದು ದೈಹಿಕವಾದುದಲ್ಲ. ಆತ್ಮಕ್ಕೆ ಸಂಭಂದಿಸಿದ್ದು, ಪ್ರೇಮ ಮಂದಿರದಲ್ಲಿ ನೀನು ಪರೀಕ್ಷೆಯಿಂದಲ್ಲ, ಪೂಜೆಯಿಂದ ವರ ಪಡೆಯಬಹುದು. ಎಂದು ಅವಳು ಬುದ್ಧಿ ಹೇಳುತ್ತಾಳೆ. ಒಟ್ಟಿನಲ್ಲಿ ಮಾಲತಿ ಸಮಾಜದ ಏಳ್ಗೆಗಾಗಿ, ಪ್ರೀತಿ, ಸಂತೋಷಗಳನ್ನು ತ್ಯಜಿಸಿ ಜನಸಾಮಾನ್ಯ ದೃಷ್ಟಿಯಲ್ಲಿ ಉನ್ನತ ಸ್ಥಾನವನ್ನುಗಳಿಸುತ್ತಾಳೆ.

ಗೋದಾನದಲ್ಲಿ ಗಮನ ಸೆಳೆಯುವ ಮತ್ತೊಂದು ಪಾತ್ರವೆಂದರೆ ಗೋವಿಂದಿ ಇವಳು ಖನ್ನಾ ಎಂಬುವರ ಪತ್ನಿ ಇವಳ ವಿಷಯದಲ್ಲಿ ಮಾಲತಿಯ ಪ್ರೇಮಿಮೆಹತಾ ಹೀಗೆ ಹೇಳುತ್ತಾಳೆ. ದೇವಿ ಮಾತೃ ಸ್ಥಾನ ಬಹಳ ಶ್ರೇಷ್ಠವಾದುದು, ತಾಯಿಯ ಕೆಲಸ ಒಂದು ಜೀವಿಯನ್ನು ಬೆಳೆಸುವುದು. ಆದ್ದರಿಂದ ಅವಳ ಕೈಗಳಲ್ಲಿ ಅಸಾಧಾರಣ ಶಕ್ತಿಯಿದೆ. ಯಾರು ಅವಳ ಮೇಲೆ ಕೋಪ ಮಾಡಿಕೊಂಡರೂ ಅವಳಿಂದ ದುಃಖ ತಿರುವಿಕೊಂಡು ಹೋದರೂ, ಅವಳಿಗೆ ಅದರ ಪರವೆ ಏನು? ಹೀಗಿದ್ದ ಗೋವಿಂದಿ ಗಂಡನ ದುರ್ನಡತೆಯಿಂದ ದುಗುಡಗೊಂಡು ಮನೆ ಬಿಟ್ಟರೂ ಅವನ ತಾಪತ್ರಯ ಮತ್ತು ಬೇನೆ, ಬೇಸರಿಕೆಗಳಲ್ಲಿ ಆಸರೆಯಾಗಿ ನಿಂತು ಸಹನಾಮೂರ್ತಿಯಾಗಿದ್ದಾಳೆ.

ಹೀಗೆ ಭಾರತದ ಜೀವನವನ್ನು ಬಹಳ ಪರಿಣಾಮಕಾರಿಯಾಗಿಯೂ ಯಥಾವತ್ತಾಗಿಯೂ ಚಿತ್ರಿಸಿಸುದಲ್ಲದೆ ಇತರ ಕಾದಂಬರಿಕಾರರು ಅದುವರೆಗೆ ಗಮನ ಕೊಡದಂತಹ ನಾಜೂಕಾದ ಸಮಸ್ಯೆಗಳನ್ನು ಎತ್ತಿ ಎಲ್ಲರ ಮುಂದೆ ಹಿಡಿದರು. ಜಗತ್ತು ಹೆಣ್ಣನ್ನು ಅಬಲೆ ಎನ್ನುತ್ತದೆ ಇರಬಹುದು, ಆದರೆ ಪ್ರೇಮಚಂದರ ತಮ್ಮ ಕಾದಂಬರಿಯಲ್ಲಿ ಅಬಲೆಗೂ ಆತ್ಮ ಸ್ಥೈರ್ಯವಿದೆ. ಸಮಯಕ್ಕನುಗುಣವಾಗಿ ಅವಳು ತನ್ನ ಅಶಕ್ತಿಯನ್ನು ಕಿತ್ತೆಸೆದು, ಬೀಸುತ್ತಿರುವ ಗಾಳಿಯ ದಿಕ್ಕನ್ನೇ ಬದಲಾಯಿಸಬಲ್ಲಳು. ಅಪರಾಧಿಯನ್ನು ತಲೆ ತಗ್ಗಿಸುವಂತೆ ಮಾಡಬಲ್ಲಳು. ಬಿರುಗಾಳಿಯನ್ನ ತಡೆಯಬಲ್ಲಳು. ತ್ಯಾಗ ಮತ್ತು ಆತ್ಮಸಮರ್ಪಣೆಯ ಭಾವನೆಗಳಿಂದ ಪ್ರಚೋದಿತಳಾಗಿ ಇತರರ ವೇದನೆಯನ್ನು ತನ್ನದೆಂದು ತಿಳಿಯ ಬಲ್ಲಳು. ಘಾಸಿಗೊಂಡ ನಾಗಿಣಿಯಂತೆ ತನ್ನ ವೈರಿಗಳ ಮೇಲೆ ಬೀಳಬಲ್ಲಳು. ಕ್ರೂರ ಶಿಕ್ಷೆ ಕೂಡ ಕೊಡಬಲ್ಲಳು. ಅಪರಾಧಿಯನ್ನು ತಲೆ ತಗ್ಗಿಸುವಂತೆ ಮಾಡಬಲ್ಲಳು. ಎಂಬ ಕೆಲವು ಮಾತುಗಳನ್ನು ಅಚ್ಚೊತ್ತುವಂತೆ ಹೇಳಿದರು. ಪ್ರೇಮಚಂದರ ಕೈಯಲ್ಲಿ ಮೂಡಿಬಂದಿರುವ ಮತ್ತು ರೂಪಗೊಂಡಿರುವ ಮಹಿಳೆಯರೆಲ್ಲರೂ ತಮ್ಮ ಚಾರಿತ್ರ್ಯದ ಶ್ರೇಷ್ಠತೆಯನ್ನು ಹಾಗೂ ಮಹತ್ವವನ್ನು ತಂತಮ್ಮ ಕ್ರಿಯೆ ಮತ್ತು ಪ್ರಕ್ರಿಯೆಗಳಿಂದ ಸ್ಪಷ್ಟಪಡಿಸಿದ್ದಾರೆ.

ಭಾರತೀಯ ಜನಪದ ಪರಂಪರೆಯಲ್ಲಿ ಭಾರತೀಯ ಮಹಿಳೆಗೆ ತನ್ನದೇ ಆದ ವಿಶಿಷ್ಠ ಸ್ಥಾನಮಾನ ಕೊಟ್ಟಿದ್ದೇವೆ. ಹೆಣ್ಣನ್ನು ತಾಯಿಯಾಗಿ ಅಕ್ಕ-ತಂಗಿಯರಾಗಿ, ಅತ್ತಿಗೆ-ನಾದಿನಿಯಾಗಿ, ಹೆಂಡತಿ ಹೀಗೆ ಹಲವಾರು ಪಾತ್ರಗಳಲ್ಲಿ ಅವುಗಳಿಗೆ ಅದರದ್ದೇ ಆದ ಸ್ಥಾಮಾನ ನೀಡಿ ಗೌರವಿಸಿದ್ದೇವೆ. ಹೆಣ್ಣನ್ನು ಸಂಸಾರದ ಕಣ್ಣು ಎಂದೂ ಕರೆದಿದ್ದೇವೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬುದನ್ನೂ ಪಾಲಿಸಿದ್ದೇವೆ. ಆದರೂ ಸಮಾಜ ಹೆಣ್ಣನ್ನು ನಿಕೃಷ್ಠ, ಅನಿಷ್ಠ, ಅವಳು ಗಂಡಸಿನ ಆಳು ಎಂಬಂತೆ ನೋಡಿಕೊಂಡು ವರ್ತಿಸುತ್ತಿದ್ದೇವೆ. ಇದನ್ನು ಕಣ್ಣಾರೆ ಕಂಡ ನಿರಂಜನರು ತಮ್ಮ ಕಾದಂಬರಿ ಪಾಲಿಗೆ ಬಂದ ಪಂಚಾಮೃತ ಎಂಬ ಕೃತಿಯಲ್ಲಿ ವಿಡಂಬಿಸಿ ಕುಟುಕಿ ಕಾದಂಬರಿಯನ್ನು ರಚಿದಿದ್ದಾರೆ. ಇಲ್ಲಿ ಕಥಾನಾಯಕಿ ಸುನಂದ ಪಡುವ ಪಾಡು ಅಷ್ಟಿಷ್ಟಲ್ಲಾ, ಅವಳು ವಿದ್ಯಾವಂತೆಯಾಗಿದ್ದರೂ ಅವಳಿಗೆ ಬರುವ ಕಷ್ಟ, ನಷ್ಟಗಳನ್ನು ಧೈರ್ಯವಾಗಿ ಎದುರಿಸಲು ಆಗದೆ ಅಳುಮುಂಜಿಯಂತೆ ಕಂಡರೂ ಕೊನೆಗೆ ಅವಳು ಧೈರ್ಯಗೆಡದೆ ಸವಾಲನ್ನು ಎದುರಿಸುವ ಪರಿಪಾಠ ಅಸಾಧಾರಣವಾದುದು.

ಮೊದಲನೆಯದಾಗಿ ಅವಳು ವಿದ್ಯಾವಂತೆ, ಸುನಂದ ಕಲಿತವಳು, ಅಲ್ಲದೆ ಸಂಸಾರ ಎರಡು ಗಾಲಿಯ ರಥವಿದ್ದಂತೆ, ಅದರಲ್ಲಿ ಒಂದು ಮುರಿದು ಬಿದ್ದರೂ ಅದು ಮುಂದೆ ಸಾಗದು ಅಲ್ಲದೆ ಅದು ಹಾಳಾಗುತ್ತದೆ ಎಂಬ ಸತ್ಯ ಅರಿತವಳು. ಹಾಗಾಗಿ ಅವಳು ನಾನು ಸ್ವಲ್ಪ ದುಡಿಕಿದರೂ ಸಂಸಾರ ಎಂಬ ನೌಕೆ ಮುರಿದು ಬೀಳುತ್ತದೆ ಎಂಬುವುದು ಗೊತ್ತು ಆಕೆಗೆ. ಆದ್ದರಿಂದ ಅವಳಿಗೆ ಏನೇ ಕಷ್ಟ ಬಂದರೂ ಸಹಿಸಿಕೊಳ್ಳುವಳು. ಇದನ್ನೇ ಗಂಡಸು ಅರ್ಥ ಮಾಡಿಕೊಳ್ಳದಿರುವು ಸಮಾಜದ ದುರಂತ.

ಎರಡನೆಯದಾಗಿ ಸಮಾಜಕ್ಕೆ ಹೆದರಿ ನಮ್ಮ ಕುಟುಂಬದ ಗುಟ್ಟು ಎಲ್ಲಿ ರಟ್ಟಾಗುತ್ತದೆಯೋ ಎಂಬ ಭಯ. ಭಾರತೀಯ ಮಧ್ಯಮ ವರ್ಗದ ಕುಟುಂಬದ ಹೆಣ್ಣು ಮಾನ ಮರ್ಯಾದೆಗೆ ಅಂಜಿ ಬದುಕುವುದು, ಅದರಂತೆ ಕಥಾ ನಾಯಕಿ ಸುನಂದ ಹೊರತಾಗಿಲ್ಲ.

ತನ್ನ ಸಂಸಾರ ಹೊಡೆದು ಹೋಳಾಗಲು ಬಿಡದೆ ಮತ್ತು ಛಿದ್ರವಾಗದಂತೆ ನೋಡಿಕೊಳ್ಳಬೇಕು. ಗಂಡನನ್ನು ಸರಿ ದಾರಿಗೆ ತರಬೇಕು, ತಾನು ಜಯಿಸಬೇಕು, ಜಯಿಸಲೇಬೇಕು ಎಂಬ ಮನೋಸ್ಥಿತಿ ಹೊಂದಿರುವವಳು ಮತ್ತು ನನ್ನ ಪಾಲಿಗಿದು ಸತ್ವ ಪರೀಕ್ಷೆ ಇದರಲ್ಲಿ ನಾನು ಸೋತು ಸಾಯಬೇಕು, ಇಲ್ಲವೆ ಗೆದ್ದು ಬದುಕಬೇಕು. ಎಂಬುದನ್ನು ಸುನಂದಾ ಪಾತ್ರದ ಮೂಲಕ ಚಿತ್ರಿಸಿದ್ದಾರೆ.

ಮೂರನೆಯದಾಗಿ ಇಲ್ಲಿನ ಮಹಿಳೆ ಸುನಂದಾ ಕೇವಲ ತನಗಾಗಿ ಅಲ್ಲ ಅವಳು ತನ್ನ ಕುಟುಂಬದವರಿಗೂ ಹೊರೆಯಾಗಬಾರದು ಎಂದು ಭಾವಿಸುವ ಮನೋಸ್ಥಿತಿಯವಳು. ನನ್ನ ತಂಗಿಗಿನ್ನು ಮದುವೆ ಗೊತ್ತಾಗಿಲ್ಲ ಇದರ ಜೊತೆ ನಾನು ಹೋಗಿ ತವರು ಮನೆಗೆ ಹೋದರೆ ಏನಾದರು ಕಿರು ವದಂತಿ ಹುಟ್ಟಿ ಅವರಿಗೆಲ್ಲಾ ಹಿಂಸೆಯಾಗುವುದು ಖಂಡಿತ. ಹೀಗೆ ಆಲೋಚಿಸುವ ಭಾರತೀಯ ಮಧ್ಯಮ ವರ್ಗದ ಮಹಿಳೆಯ ಪ್ರತಿನಿಧಿಯಾಗಿ ಸುನಂದ ಕಾಣಸಿಗುತ್ತಾಳೆ.

ನಾಲ್ಕನೆಯದಾಗಿ ಒಬ್ಬ ಮಧ್ಯವರ್ಗದ ಮಹಿಳೆ ನಾನು ಗೆಲ್ಲಲೇಬೇಕು ಗೆದ್ದು ಬದುಕಬೇಕು ಎನ್ನುವ ಆಲೋಚನೆಯನ್ನು ಈ ಮಾತುಗಳ ಮೂಲಕ ನಿರಂಜನರು ತೋರಿಸಿದ್ದಾರೆ ತಪ್ಪು ತಾನು ಯೋಚಿಸುತ್ತಿರುವುದು ತಪ್ಪು ವಿದ್ಯಾವಂತೆಯಾದ ನಾನು ಹೀಗೆ ಮಾಡಿದರೆ ಲೋಕ ಏನೆಂದಿತು? ಕುಸುಮಾ ಏನೆಂದಾಳು? ರಾಧಮ್ಮ ಏನೆಂದಾರು? ನಾನು ಹೇಡಿಯೇ ಹಾಗಾದರೆ? ಕೈಲಾಗದ ದುರ್ಬಲಳೇ? ಹೆತ್ತ ಮಗುವನ್ನು ಕೈಯಾರೆ ಕೊಲ್ಲುವ ಪಾಪಿಯೇ? ತಾಯಿ ತಂದೆ ಕೆಟ್ಟವರೆಂದು ಆ ಎಳೆಯ ಕಂದಮ್ಮ ಕಷ್ಟ ಪಡಬೇಕೇನು? ಇಷ್ಟೊಂದು ಒಳ್ಳೆಯವಳೆನಿಸಿಕೊಂಡ ತಾನು ಇಂತಹ ಯೋಚನೆಯನ್ನು ಮಾಡಿದ್ದಾದರೂ ಹೇಗೆ?

ಮನುಷ್ಯತ್ವವೆನ್ನಲ್ಲವನ್ನು ಕಳೆದುಕೊಂಡಿದ್ದ ಆ ಗಂಡಿನ ಭೋಗದ ಆಟಿಕೆಯಾಗುವುದು, ಮನೆಗೆಲಸದ ತೊತ್ತಾಗುವುದು, ದುಸ್ಸಾಹಸವಾಗಿತ್ತು ನಿಜ ಆದರೆ ಈ ಮಗುವಿಗೋಸ್ಕರ ತಾನು ಅದನ್ನೆಲ್ಲ ಸಹಿಸಬೇಕು. ಮಗುವೊಂದುದರ ಸಲುವಾಗಿಯೇ ತಾನು ಬದುಕಬೇಕು ಎಂದು ಯೋಚಿಸುವ ಮನೋಸ್ಥಿತಿ ವುಳ್ಳವಳಾಗಿ ಕಾಣುತ್ತಾಳೆ.

ಅಳೋದಿಲ್ಲ ಇನ್ನು ಮುಂದೆ ನಾನು ಅಳೋದಿಲ್ಲ ಲೋಕವೆಲ್ಲ ಬರಡು ಭೂಮಿಯಲ್ಲ ಅಲ್ಲಿ ಇಲ್ಲಿಸುಂದರವಾದ ಪುಷ್ಕರಗಳಿವೆ, ತಿಳುವಳಿಕೆಯುಳ್ಳ ಮಾನವರಿದ್ದಾರೆ. ಎಂಬುವುದನ್ನು ನಾವು ಬಲ್ಲೆವು ನಾನಿನ್ನು ಸೋಲುವುದಿಲ್ಲ ಎನ್ನುವ ಸ್ಥಿತ ಪ್ರಜ್ಞೆಯುಳ್ಳ ಮಹಿಳೆಯಾಗಿದ್ದಾಳೆ ಸುನಂದ.

ನಿರಂಜನರ ಮತ್ತೊಂದು ಕಾದಂಬರಿ ಏಕಾಂಗಿನಿಯು ಪಾಲಿಗೆ ಬಂದ ಪಂಚಾಮೃತ ಕಾದಂಬರಿಯ ಮುಂದುವರಿದ ಭಾಗವಾಗಿದೆ, ೫೦-೬೦ ದಶಕದಲ್ಲಿ ಭಾರತದಲ್ಲಿನ ಸ್ಥಿತಿಗತಿಯ ವಿವರಣೆಯಾಗಿದೆ. ಒಬ್ಬ ಮಹಿಳೆ ಇಂತಹ ಸಂಪ್ರದಾಯ ಬದ್ಧ ಸಮಾಜದಲ್ಲಿ ತಾನೊಬ್ಬಳೇ ಬದುಕಬಲ್ಲಳು ಎಂಬುದನ್ನು ತೋರಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿದೆ. ಆಕೆಯು ಅಂದರೆ ಕಥಾನಾಯಕಿ ಸುನಂದ ಸಮಾಜದ ಪ್ರತಿಷ್ಠಿತ ಮಹಿಳೆಯಲ್ಲ, ಸ್ತ್ರೀ ಸ್ವಾತಂತ್ರ್ಯಕ್ಕೆ ಹೋರಾಡಿದ ಮಹಿಳೆಯೂ ಅಲ್ಲ, ತಾನೇ ಹೊಸಲು ದಾಟಿ ಕೆಟ್ಟ ಹಾದಿ ಹಿಡಿದ ಹೆಣ್ಣು ಅಲ್ಲ. ಆಕೆ ಒಂದು ಮಧ್ಯಮ ವರ್ಗದ ಒಳ್ಳೆ ಮನೆತನದ ಸುಸಂಸ್ಕೃತ ಮನೆತನದ ಸಾಮಾನ್ಯ ಭಾರತೀಯ ಕುಟುಂಬದ ಹೆಣ್ಣು. ಹೇಗೆ ತನ್ನ ಬಗ್ಗೆ ಯೋಚಿಸುವಳೋ ಹಾಗೆ ಅವಳು (ಸುನಂದ) ನಾನು ನನ್ನ ಗಂಡನೊಂದಿಗೆ ಬದುಕಬೇಕು, ಬದುಕು ಸವಿಜೇನಾಗಬೇಕು ಎಂಬುದೇಅವಳ ಹೆಬ್ಬಯಕೆಯಾಗಿತ್ತು. ಆದರೆ ಪುರುಷ ಪ್ರಧಾನ ಸಮಾಜದಲ್ಲಿ ತನ್ನ ಪತಿ ಅತಿ ಕ್ರೂರಿಯಾದಾಗ ಬದುಕು ಅಸಹನೀಯವಾದಾಗ ಆತನನ್ನು ಸುಧಾರಿಸಲು ಮಾಡಿದ ಪ್ರಯತ್ನ ವಿಫಲವಾದಾಗ ಆಕೆಗೆ ಉಳಿದ ಏಕೈಕ ಮಾರ್ಗ ಯಾವುದು? ಎಂಬ ಪ್ರಶ್ನೆ ಆಕೆ ಕೈಗೊಂಡ ಕತೆಯೇ ಏಕಾಂಗಿನಿ.

ಸುನಂದೆಯ ಈಗಿನ ಮನಸ್ಥಿತಿ ಬೇರೆಯದೇ ಆಗಿದೆ. ಮೊದಲು ನಾನು ಆತ್ಮಹತ್ಯೆಯ ಯೋಚನೆ ಮಾಡಿದವಳು ಈಗ ಅವಳ ಮನಸ್ಸು ನಿರ್ಮಲವಾಗಿದೆ. ಹೃದಯ ಮೇಲೆ ಆಗಿದ್ದ ಗಾಯಗಳು ಮಾಯವಾಗಿವೆ. ಘೋರ ರಾತ್ರಿ ಕಳೆದು ಬೆಳಕು ಹರಿದ ಹಾಗೆ, ನನಗಿದು ಪುನರ್ಜನ್ಮ ವಿಜಯಾ ಎಂದು ಹೇಳುವಲ್ಲಿ ಮತ್ತು ನಾನು ಯಾರಿಗೂ ಕೆಟ್ಟದ್ದು ಮಾಡಿಲ್ಲ, ಮುಂದೆಯೂ ಮಾಡಲ್ಲ ಎಂಬ ಮಾತಲ್ಲಿ ಅವಳ ದಿಟ್ಟ ಹಾಗು ಧೈರ್ಯವನ್ನು ಕಾಣುತ್ತೇವೆ.

ಇಲ್ಲಿ ಪುಟ್ಟಣ್ಣ ಕೇವಲ ಏಕಮಾತ್ರ ವ್ಯಕ್ತಿ, ಇವನ ಪಾತ್ರ ಪುರುಷ ಪ್ರಧಾನ ಸಮಾಜದ ಪ್ರತೀಕವಲ್ಲ ಎಂಬುವುದು ಸ್ಪಷ್ಟ. ಈ ಪಾತ್ರಕ್ಕೆ ವಿರುದ್ಧವಾಗಿ ಸುನಂದೆಯ ಕಷ್ಟಗಳಿಗೆ ಮರುಗುವ ರಾಮಕೃಷ್ಣಯ್ಯ, ವೆಂಕಟರಾಮಯ್ಯ, ಕೃಷ್ಣಪ್ಪ ಮುಂತಾದ ಪುರುಷ ಪಾತ್ರಗಳನ್ನು ನಾವು ಗಮನಿಸಬಹುದು.

ಹಾಗೆ ಸುನಂದೆಯ ಹಸನ ಬದುಕಿಗಾಗಿ ಅನೇಕ ಕುಟುಂಬಗಳು ಅಂದರೆ ನೆರೆಹೊರೆಯವರು ರಾಧಮ್ಮ, ಕುಸುಮ, ಗೀತ ಇವರೆಲ್ಲರ ಕುಟುಂಬಗಳು ಸುನಂದೆಯ ಬದುಕನ್ನು ಮತ್ತೆ ಚಿಗುರಿಸಲು ನೀರು ಗೊಬ್ಬರ ಹಾಕಿ ಪೋಷಿಸಲು ಶ್ರಮಿಸಿದ ಕುಟುಂಬಗಳಾಗಿವೆ.

ಒಟ್ಟಾರೆ ಏಕಾಂಗಿನಿ ಕಾದಂಬರಿಯಲ್ಲಿ ಲೇಖಕರು ಆ ಕಾಲಘಟ್ಟದ ಸಮಯದಲ್ಲಿ ಸಂಪ್ರದಾಯಸ್ಥ ಭಾರತೀಯ ಮಹಿಳೆಯ ಸ್ಥಿತಿಗತಿಯನ್ನು ತಿಳಿಸುವಲ್ಲಿ ಲೇಖಕರು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಹೆಣ್ಣು ಸಮಾಜದ ಮತ್ತು ಕುಟುಂಬದ ಕಣ್ಣು, ಅವಳು ಸ್ವಚ್ಛವಾಗಿದ್ದರೆ ಇಡೀ ಸಮಾಜವು ಸ್ವಚ್ಛವಾಗುವುದರಲ್ಲಿ ಸಂದೇಹವಿಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ.

ಕೊನೆಯದಾಗಿ ಹೇಳಬೇಕೆಂದರೆ ಪ್ರೇಮಚಂದರು ಮತ್ತು ನಿರಂಜನರು ಸಾಹಿತ್ಯ ಕ್ಷೇತ್ರದ ಪ್ರಮುಖ ಘಟ್ಟ . ಅವರ ಲೇಖನ ಕಾರ್ಯಕ್ಕೆ ಒಂದು ಯುಗದ ಯೋಗ್ಯತೆ ಇದೆ. ಅವರ ಕಾದಂಬರಿಗಳ ನಾಯಕಿಯರ ವ್ಯಕ್ತಿ ಚಿತ್ರಗಳನ್ನು ವಿಶ್ಲೇಷಿಸಿದರೆ ಮಹಿಳೆ ರಾಷ್ಟ್ರದ ಮಾನ, ತ್ಯಾಗ ಮತ್ತು ಆತ್ಮ ಸಮರ್ಪಣಾ ದೇವಿಯಾಗಿದ್ದಾಳೆ. ಮಮತೆ ಮತ್ತು ನಿಷ್ಠೆಯ ಮೂರ್ತಿಯೂ ಹೌದು. ಅವಳನ್ನು ಗೌರವಿಸಿದರೆ ದೇವಿ, ಸಹನಾ ಮೂರ್ತಿಯಾಗಿದ್ದಾಳೆ, ಕರುಣಾಮಯಿಯಾಗಿದ್ದಾಳೆ, ದಿಟ್ಟತನದಿಂದ ಸಮಾಜವನ್ನು ಎದುರಿಸಿ ನಿಲ್ಲ ಬಲ್ಲವಳೂ ಆಗಿದ್ದಾಳೆ, ಅದರ ಜೊತೆಯಲ್ಲಿ ಆಕೆಯನ್ನ ಅಗೌರವಿಸಿದರೆ ರಾಕ್ಷಸಿಯಾಗಿ ನಿಲ್ಲಬಲ್ಲವಳಾಗಿದ್ದಾಳೆ.

## ಗ್ರಂಥ ಋಣ:


೧. ಪ್ರೇಮಚಂದರು ಕಂಡ ಸಮಾಜ ಲೇ: ದು, ನಿಂ. ಬೆಳಗಲಿ : ಪುಸ್ತಕ ಪ್ರೇಮಚಂದ್ (ವಿಚಾರ ಸಂಕಿರಣ) ಸಂ: ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು ಪ್ರಕಾಶಕ: ಹಂ.ಪ.ನಾ.(೧೯೮೦)

೨. ಗೋದಾನ: ಲೇ: ಪ್ರೇಮಚಂದ ಅನು: ರಾಮಕೃಷ್ಣ ಉಡುಪ ಪ್ರ: ಸಾಹಿತ್ಯ ಭಂಡಾರ ಹುಬ್ಬಳ್ಳಿ (೧೯೫೬)

೩. ಪ್ರಗತಿಶೀಲ ಕಾದಂಬರಿಕಾರ ಪ್ರೇಮಚಂದ್, ಲೇ: ಬಸವರಾಜ ಕಟ್ಟೀಮನಿ ಪುಸ್ತಕ ಪ್ರೇಮಚಂದ್ (ವಿಚಾರ ಸಂಕಿರಣ) ಸಂ: ಕನ್ನಡ ಸಾಹಿತ್ಯ ಪರಿಷತ್ತು

೪. ಪ್ರೇಮಚಂದರ ಕಾದಂಬರಿಗಳು, ಲೇ: ಲಲಿತ. ಸಂ: ಕುವೆಂಪು ಪ್ರ: ಪ್ರಸಾರಾಂಗ ಮೈಸೂರು ವಿ. ವಿ. (೧೯೭೪)

೫. ಬದುಕು ಬರಹ ಲೇ: ವಿ.ಎಂ. ಇನಾಂದಾರ್ ಪುಸ್ತಕ: ಕಾರಂತ ಕೆಲವು ಮುಖಗಳು ಸಂ: ಜಿ ಎಸ್. ಭಟ್ ಮತ್ತು ಕೆ.ವೈ. ಶಿವಕುಮಾರ್

೬. ಭಾರತೀಯ ಸಾಹಿತ್ಯ ಸಮೀಕ್ಷೆ ಲೇ: ಪ್ರೊ. ಕೃಷ್ಣಮೂರ್ತಿ ಪುತ್ತೂರು ಸಂ: ಡಾ, ಎಂ.ಎಸ್. ಸುಂಕಾಪುರ (೧೯೨೫)

೭. ಭಾರತೀಯ ಸಾಹಿತ್ಯ ನಿರ್ಮಾಣಕಾರರು, ಪ್ರೇಮಚಂದ ; ಅನು ; ಶಾಂತಿನಾಥ ದೇಸಾಯಿ : ಸಾಹಿತ್ಯ ಅಕಾಡೆಮಿ

೮. ಚಿರಸ್ಮರಣೆ ; ಲೇ ; ನಿರಂಜನ ;ಡಿವಿಕೆ ಮೂರ್ತಿ ಪ್ರಕಾಶನ: ಮೈಸೂರು

೯. ಗೋರ್ಕಿ ಮತ್ತು ಪ್ರೇಮಚಂದ್; ಲೇ; ಮದನಲಾಲ್ ಮಧು ರಾದುಗ ಪ್ರಕಾಶನ. ಮಾಸ್ಕೋ

೧೦. ಕನಸು (ನಿರಂಜನರ ಮೂವತ್ತು ಸಂಪುಟಗಳಲ್ಲಿ) ; ನಿರಂಜನ ; ಐಬಿಹೆಚ್ ಪ್ರಕಾಶನ ಬೆಂಗಳೂರು

೧೧. ಮೃತ್ಯುಂಜಯ : ನಿರಂಜನ ; ಐಬಿಹೆಚ್ ಪ್ರಕಾಶನ. ಬೆಂಗಳೂರು

೧೨. ಪ್ರೇಮಚಂದರು ಮತ್ತು ಅವರ ಸಾಹಿತ್ಯ : ಪ್ರಾಚಾರ್ಯ ಡಿ ಆರ್ ಬೆಳ್ಳಟ್ಟಿ ಮಲ್ಲಿಗೆ ಪ್ರಕಾಶನ

೧೩. ಸಾಲುದೀಪಗಳು : ಸಂ ಪ್ರೊ ಜಿ ಎಸ್ ಸಿದ್ದಲಿಂಗಯ್ಯ, ಪ್ರೊಎಂ ಹೆಚ್ ಕೃಷ್ಣಯ್ಯ ; ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು